UN – 498

BBM 3 I SEM.

# ಒಂದನೇ ಸೆಮಿಸ್ಟರ್ ಬಿ.ಬಿ.ಎಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2015

Nov DEC

## (ರಿಪೀಟರ್) (2011 – 12 ಮತ್ತು ನಂತರದ)

REPEATER

## ಕನ್ನಡ ಭಾಷಾ ಪತ್ರಿಕೆ – I

## ಸಾಹಿತ್ಯ ಸಲ್ಲಾಪ – 0

ST. CLARET COLLEGE LIBRARY

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 100

I. ಈ ಪದ್ಯದ ಭಾವಾರ್ಥವನ್ನು ಬರೆಯಿರಿ : **(1×6=6)**

1) ಬಿನದಕೆ ಪಾಡುತಿರೆ ನುಣ್

ದನಿ ನಿದ್ರೆಗೆ ಕತಕ ಬೀಜ ಮಾಯ್ತೆನೆ ಮೃಗ ಲೋ

ಚನೆ ತಿಳಿದಾಲಿಸಿ ಮುಟ್ಟಿದ

ಮನಮುಂ ತೊಟ್ಟನೆ ಪಸಾಯದಾನಂಗೊಟ್ಟಳ್

2) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×3=6)**

ಪಂಪ, ಎ.ಎನ್. ಮೂರ್ತಿರಾವ್, ಹೆತ್ತವರಿಗೆ ಹೆಗ್ಗಣ ಮುದ್ದು ಕೂಡಿದವರಿಗೆ ಕೋಡಗ ಮುದ್ದು

II. 1) ಇವುಗಳಲ್ಲಿ **ಐದು** ಪದಗಳಿಗೆ ಮೂಲ ರೂಪ ಬರೆಯಿರಿ : **(5×1=5)**

ಹೋಗು, ವಿಧಿ, ಕಾಲೇಜು, ಜಾತ್ರೆ, ಚಣ, ಹೇಸಿದ, ವನ

2) ಇವುಗಳಲ್ಲಿ **ಐದು** ಪದಗಳಿಗೆ ಅರ್ಥ ಬರೆಯಿರಿ : **(5×1=5)**

ಆಜಿ, ಪರಮೆ, ಶಯ್ಯೆ, ಅಂಗಜ, ಪಸಾಯದಾನ, ಪುಳಿಂದ

3) ಇವುಗಳಲ್ಲಿ **ಐದು** ಪದಗಳನ್ನು ಬಿಡಿಸಿ ಬರೆಯಿರಿ : **(5×1=5)**

ಚಂದ್ರೋದಯ, ನೋವಿರುವವರು, ಬೆಳ್ಗೊಡೆ, ಹೆಮ್ಮರ, ಮುಕ್ಕಣ್ಣ, ಅಂತರ್‌ಮುಖಿ, ಕಮಲಾಕ್ಷಿ

4) ಕಮಲಮುಖಿ, ವದನ, ಇದೇ ರೀತಿಯ ಐದು ಪದಗಳನ್ನು ಸ್ವಂತವಾಗಿ ರಚಿಸಿ. **(5×1=5)**

III. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(4×5=20)**

1) ಪೂರ್ಣಸ್ವಾಮಿ ಅಯ್ಯಂಗಾರ್ ಸುಳ್ಳನ್ನು ನಿಜವಾಗಿಸಲು ಪಟ್ಟ ಪಾಡು.

2) ತಡವಾಗಿ ಬಂದ ಅಮೃತಮತಿಯನ್ನು ನೋಡಿದಾಗ ಅಷ್ಟಾವಂಕನ ಪ್ರತಿಕ್ರಿಯೆ.

3) ಚೋಮನ ಕುಟುಂಬ ಗುಲಾಮತನಕ್ಕೆ ಒಳಗಾದ ಸನ್ನಿವೇಶ.

P.T.O.

4) ಗುಂಡಾಚಾರ್ಯರು ಅಯ್ಯಂಗಾರರಿಗೆ ಕೊಟ್ಟ ಕಿರುಕುಳ.

5) ಪಾಪಣ್ಣನ ಮಾನವೀಯ ಮೌಲ್ಯ.

6) ಪೊಲಿಬಿಯಸ್ ಮತ್ತು ಮೂರ್ಖತನ.

IV. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(4×12=48)**

1) ಕರ್ಣನ ಸ್ವಾಮಿ ನಿಷ್ಠೆ, ಕೃಷ್ಣನ ಕುತಂತ್ರ, ದುರ್ಯೋಧನನ ಸಮಯ ಸಾಧಕತನವನ್ನು ಕುರಿತು ಬರೆಯಿರಿ.

**ಅಥವಾ**

ಅಮೃತಮತಿಯು ಅಷ್ಟಾವಂಕನ ಸಂಗೀತಕ್ಕೆ ಮಾರು ಹೋದದು ಹೇಗೆ ? ವಿವರಿಸಿ.

2) ರಕ್ತ ಮಾಂಸಗಳಿಂದ ತುಂಬಿಕೊಂಡ ರಂಗಿನ ಪ್ರಪಂಚವು 'ಅಸ್ಥಿಪಂಜರ' ಕತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

**ಅಥವಾ**

ಊಳಿಗಮಾನ್ಯ ಸಂಸ್ಕೃತಿ 'ಚೋಮನ ಮಕ್ಕಳ ಹಾಡು'' ಕವಿತೆಯಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿ.

3) ಪೂರ್ಣಸ್ವಾಮಿ ಅಯ್ಯಂಗಾರ್, ಕುಪ್ಪಣ್ಣನವರ ಸ್ವಭಾವಗಳನ್ನು ವಿವರಿಸಿ.

**ಅಥವಾ**

ತನ್ನ ವೈಚಾರಿಕ ನಿಷ್ಠೆಯಿಂದಾಗಿ ರಾಬರ್ಟ್ ಇಂಗರ್‌ಸಾಲ್ ಯಾವ ಕಷ್ಟಗಳನ್ನು ಎದುರಿಸಬೇಕಾಯ್ತು ? ವಿವರಿಸಿ.

4) ಮುಖವಾಡ ಹಾಕಿಕೊಂಡವರ ನಿಜ ವ್ಯಕ್ತಿತ್ವ ಹೇಗೆ ಅನಾವರಣಗೊಳ್ಳುತ್ತದೆ ? ವಿವರಿಸಿ.

**ಅಥವಾ**

ಖಾದರ್, ಜ್ಯೋತಿಷಿ, ಮುಖವಾಡದಪ್ಪ – ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿ.